MVC No.568 /2019 PW-1

**<u>ದಿನಾಂಕ 13.07.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಎದುರುದಾರರಾದ ಆರ್ 2 ಪರ ವಕೀಲರಿಂದ :</u>**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಆದರೆ ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಅಪಘಾತ ಪಡಿಸಿದ ಮೋಟಾರ್ ಸೈಕಲ್ ನ ನೊಂದಣಿ ಸಂಖ್ಯೆ ಗೊತ್ತಿಲ್ಲ. ಇದುವರೆಗೂ ಸದರಿ ಮೋಟಾರ್ ಸೈಕಲ್ ಅನ್ನು ನನಗೆ ಡಿಕ್ಕಿ ಪಡಿಸಿದ ತಕ್ಷಣ ಹಿಂದೆ ತಿರುಗಿ ನೋಡಿರುತ್ತೇನೆ. ಸದರಿ ಮೋಟಾರ್ ಸೈಕಲ್ ನ ಬಣ್ಣ ಗೊತ್ತಿಲ್ಲ. ಪೋಲಿಸರು ನನಗೆ ಅಪಘಾತವಾದ ನಂತರ ವಾಹನವನ್ನು ತೋರಿಸಿಲ್ಲ. ಸದರಿ ದಿನ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ಹೋಟೆಲ್ ಗೆ ಹೋಗಿ ತಿಂಡಿಯನ್ನು ತಿಂದು ನಂತರ ಮನೆಗೆ ಹೋಗಲು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದೆ. ಸದರಿ ದಿನ ನನ್ನ ಜೊತೆ ನನ್ನ ಮೊಮ್ಮಗಳು ಇದ್ದಳು. ನನಗೆ 60 ವರ್ಷ ವಯಸ್ಸಾಗಿದೆ. ನಾನು Oldage Pension ಅನ್ನು 6 ವರ್ಷಗಳಿಂದ ಪಡೆದುಕೊಳ್ಳುತ್ತಿದ್ದೇನೆ. ನನಗೆ ದೂರ ದೃಷ್ಟಿ ಚೆನ್ನಾಗಿದೆ. ಸ್ವಲ್ಪ ದೂರದ ವಸ್ತುಗಳು ಜನರು ಕಾಣಿಸುತ್ತಾರೆ. ನನ್ನ ಮೊಮ್ಮಗಳು ಪಿಯುಸಿಯವರೆಗೂ ಓದಿರುತ್ತಾರೆ. ಅಪಘಾತವಾದ ಸಮಯದಲ್ಲಿ ನನ್ನ ಬಳಿ ಮತ್ತು ನನ್ನ ಮೊಮ್ಮಗಳ ಬಳಿಯೂ ಮೊಬೈಲ್ ಇತ್ತು. ನಾನು ಬಿದ್ದಾಗ ನನ್ನ ಮೊಮ್ಮಗಳು ಛಾವಚಿತ್ರ ತೆಗೆದು ಇಟ್ಟು ಕೊಂಡಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಿನ ನನಗೆ ಮೈ ಕೈ ನೋವು ಇದ್ದುದ್ದರಿಂದ ನಾನು ಗಂಗಪ್ಪ ಆಸ್ಪತ್ರೆಗೆ ಬಂದಿದ್ದೆ. ಅಪಘಾತವಾದ ರಸ್ತೆ ಟಾರ್ ರಸ್ತೆ ನಾವು ರಸ್ತೆಯ ಪಕ್ಕದಲ್ಲಿಯೇ ಬರುತ್ತಿದ್ದೆವು. ಅಪಘಾತಪಡಿಸಿದ ವಾಹನದ ನೋಂದಣಿ ಸಂಖ್ಯೆಯನ್ನು ನನ್ನ ಮೊಮ್ಮಗಳು ಹೇಳಿರುತ್ತಾಳೆ. ನನ್ನ ಮೊಮ್ಮಗಳನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ ಆದರೆ ಆಕೆಯ ಗಂಡನ ಮನೆಯವರು ಕಳುಹಿಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅಪಘಾತವಾದ ತಕ್ಷಣ ನನಗೆ ಪ್ರಜ್ಞೆ ಇರಲಿಲ್ಲ ನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಪ್ರಜ್ಞೆ ಬಂದಿರುತ್ತದೆ. ನಾನು ಹಾಜರುಪಡಿಸಿರುವ ನಿಪಿ-7 ಡಿಸ್ ಚಾರ್ಜ್ ಸಮ್ಮರಿಯಲ್ಲಿ

ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಾನು ದಿಃ14.07.2019 ರಂದು ಶಾಂತಿ ನರ್ಸಿಂಗ್ ಹೋಮ್ ಗೆ ಜ್ವರಕ್ಕೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆಂದರೆ ನನಗೆ ತೋಳು ನೋವಾಗಿದ್ದರಿಂದ ಜ್ವರ ಬಂದಿತ್ತು ಎಂದು ನುಡಿಯುತ್ತಾರೆ. ಅಪಘಾತವಾದ ತಕ್ಷಣ ನನ್ನನ್ನು ಆಸ್ಪತ್ರೆಯಿಂದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಶಾಂತಿ ನರ್ಸಿಂಗ್ ಹೋಮ್ ಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ನನಗೆ ಯಾವುದೇ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ನನಗೆ ಶ್ವಾಸಕೋಶಕ್ಕೆ ಸೋಂಕು ಆಗಿತ್ತು ಆ ಬಗ್ಗೆ ನಾನು ಶಾಂತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆಂದರೆ ಸುಳ್ಳು. ನಾನು ಆಧಾರ್ ಕಾರ್ಡ್ ಅನ್ನು ಪಡೆದುಕೊಂಡು 15 ವರ್ಷಗಳಾಗಿವೆ. ಅಪಘಾತವಾಗುವುದಕ್ಕಿಂತ ಮೊದಲು ನನ್ನ ಬಳಿ ಆಧಾರ್ ಕಾರ್ಡ್ ಇತ್ತು. ಅಪಘಾತವಾದ ನಂತರ ನಾನು ಆಧಾರ್ ಕಾರ್ಡ್ ಮಾಡಿಸಿರುತ್ತೇನೆ ಎಂದರೆ ಹಳೆಯದು ಇತ್ತು ಈಗ ಮಾಡಿಸಿರಬಹುದು ಎಂದುನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಶಾಂತಿ ನರ್ಸಿಂಗ್ ಹೋಂ ನ ವೈದ್ಯಕೀಯ ಬಿಲ್ಲುಗಳು ಸದರಿ ಅಪಘಾತದಿಂದ ಉಂಟಾದ ಗಾಯಗಳಿಗೆ ಸಂಬಂದಪಟ್ಟಂತೆ ಚಿಕಿತ್ಸೆ ಪಡೆದಿರುವುದು ಅಲ್ಲ ಶ್ವಾಸಕೋಶ ಸಂಬಂದಿ ತೊಂದರೆಗೆ ಪಡೆದುಕೊಂಡ ಚಿಕಿತ್ಸೆ ಎಂದರೆ ಸರಿಯಲ್ಲ. ನಾನು ವೈದ್ಯರ ಸಲಹಾ ಚೀಟಿಯನ್ನು ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಶಾಂತಿ ಆಸ್ಪತ್ರೆಯ ನರ್ಸಿಂಗ್ ಹೋಂ ನ ವೈದ್ಯರನ್ನು ಕರೆತಂದು ಸಾಕ್ಷ್ಯ ನುಡಿಸಲು ತೊಂದರೆ ಇಲ್ಲ. ಸದರಿ ದಿನ ನನಗೆ ಉಷಾರಿರಲಿಲ್ಲ ನಡೆದುಕೋಂಡು ಬರುತ್ತಿರುವಾಗ ನನಗೆ ತಲೆ ತಿರುಗಿ ಬಂತು ನಾನು ಕೆಳಗೆ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ಈ ವಿಷಯವನ್ನು ನನ್ನ ಮೊಮ್ಮಗಳು ಮೊಬೈಲ್ ನಲ್ಲಿ ಸೆರೆ ಹಿಡಿದಿರುತ್ತಾರೆ ಆ ಕಾರಣದಿಂದ ಅದನ್ನು ಮರೆಮಾಚಲು ಅವರನ್ನು ಸಾಕ್ಷ್ಯ ನುಡಿಸಲು ಹಾಜರುಪಡಿಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಅಪಘಾತದಲ್ಲಿ 2 ನೇ ಎದುರುದಾರರ ವಿಮೆ ಹೊಂದಿದ ವಾಹನ ಭಾಗಿಯಾಗಿಲ್ಲದೇ ಇದ್ದರೂ ಸಹ ನಾನು ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು : ಎದುರುದಾರರಾದ ಆರ್ 1  ಪರ ವಕೀಲರಿಂದ :</u>**

ಎದುರುದಾರರಾದ ಆರ್ 1  ಪರ ವಕೀಲರು ಈ ಮೇಲೆ ನಡೆದ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.

**<u>ಮರುವಿಚಾರಣೆ : ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.